**ದಿನಾಂಕಃ 10.03.2026 ರಂದು ಸಾಕ್ಷಿದಾರರನ್ನು ಕರೆಸಿ ಪ್ರಮಾಣ ವಚನ ಬೋಧಿಸಲಾಯಿತು.**

**<u>ಪಾಟೀ ಸವಾಲು – 1ನೇ ಪ್ರತಿವಾದಿ ಪರ ವಕೀಲರಿಂದ</u>**

ನನಗೆ ಕನ್ನಡ ಓದಲು ಬರೆಯಲು ಬರುತ್ತದೆ. ಈ ಕೇಸಿನ ಸಂಗತಿಯನ್ನು ತಿಳಿದುಕೊಂಡಿದ್ದೇನೆ. ನಿಪಿ–1 ನ್ನು ಮಹದೇವಪ್ಪರವರು ತಂದಿರುತ್ತಾರೆ . ಮಹದೇವಪ್ಪರವರು ಕೊಳ್ಳೇಗಾಲದ ಹಿರಿಯ ವಕೀಲರಿರುತ್ತಾರೆ . ನಿಪಿ–1 ನ್ನು ಜೆರಾಕ್ಸ ಶಾಪ್ ನಲ್ಲಿ ಟೈಪ್ ಮಾಡಿಸಿರುತ್ತಾರೆ . 1 ನೇ ಪ್ರತಿವಾದಿಯ ಕಸಿನ್ ಮನೆಯಲ್ಲಿ ನಿಪಿ–1ಕ್ಕೆ ನಾವು ಸಹಿ ಮಾಡಿರುತ್ತೇವೆ. ನನಗೆ ಎ ಆರ್ ಡೈರಿಯಲ್ಲಿ ಕೆಲಸ ಮಾಡುತ್ತಿದ್ದ ಕಾರಣ ನನ್ನನ್ನು ಸಾಕ್ಷಿಯಾಗಿ ಕರೆದುಕೊಂಡು ಬಂದಿರುತ್ತಾರೆ . ನಾನು ಎ ಆರ್ ಡೈರಿಯಲ್ಲಿ 6 ತಿಂಗಳು ಕೆಲಸ ಮಾಡಿರುತ್ತೇನೆ. ನನ್ನ ಪ್ರಮಾಣ ಪತ್ರದಲ್ಲಿರುವ ಸಂಗತಿಗಳನ್ನು ಓದಿ ತಿಳಿದುಕೊಂಡಿದ್ದೇನೆ . ನನ್ನ ಪ್ರಮಾಣ ಪತ್ರದಲ್ಲಿ ಭೂಮಿ ಯಾವ ಊರಿನಲ್ಲಿದೆ ಮತ್ತು ಅದರ ವಿಸ್ತೀರ್ಣ ನಮೂದು ಮಾಡಿಲ್ಲ ಎಂದರೆ ಸರಿ. ನಿಪಿ–1ರ 4ಮತ್ತು 5ನೇ ಪುಟದಲ್ಲಿ ಮಾಡಿರುವ ಸೇರ್ಪಡೆಯನ್ನು ಮಹದೇವಪ್ಪ ವಕೀಲ ರವರು ಮಾಡಿರುತ್ತಾರೆ . ನಾನು ಸಹಿ ಹಾಕುವ ಪೂರ್ವದಲ್ಲೇ ಸದರಿ ಸೇರ್ಪಡೆ ಆಗಿರುತ್ತದೆ . ನಿಪಿ–1 ರಲ್ಲಿ ಇಂತಿಂಥ ಪುಟದಲ್ಲಿ ಸೇರ್ಪಡೆ ಯಾಗಿರುವ ಬಗ್ಗೆ ಹಿಂಬರಹ ಮಾಡಿರುವುದಿಲ್ಲ . ನಿಪಿ–1 ಆಗುವ 3–4 ದಿನ ಹಿಂದಿನಿಂದಲೇ ನಾನು ಕೊಳ್ಳೇಗಾಲದಲ್ಲಿದ್ದೆ . ನಿಪಿ–1 ಮಾಡುವ ಕಾಲಕ್ಕೆ ಪ್ರತಿವಾದಿ 1 ರವರಿಗೆ ಸಂಬಂದ ಪಟ್ಟ ನೊಂದಾಯಿತ ಕ್ರಯಪತ್ರ ಮತ್ತು ಪಹಣಿ ಯನ್ನು ನೋಡಿರುತ್ತೇನೆ. ನಿಪಿ–1 ಕ್ಕೆ ಸಹಿ ಮಾಡುವ ಕಾಲಕ್ಕೆ 1ನೇ ಪ್ರತಿವಾದಿಯ ಸಂಬಂಧಿಕರಿದ್ದರು. ನಿಪಿ–1 ಕ್ಕೆ 2 ನೇ ಸಾಕ್ಷಿ ಸಹಿ ಹಾಕಿದ ಗೀತಾ ರವರ ಗಂಡನ ಹೆಸರು ನನಗೆ ಗೊತ್ತಿಲ್ಲ . ಸದರಿ ಗೀತಾ ರವರನ್ನು ನಿಪಿ–1 ಆಗುವ ಪೂರ್ವದಲ್ಲಿ ನೋಡಿರುವುದಿಲ್ಲ . ವಾದಿ ಸದರಿ ಸಾಕ್ಷಿ ಗೀತಾ ರವರನ್ನು ಕರೆಸಿರುತ್ತಾರೆ . ಕೊಳ್ಳೇಗಾಲದ 1ನೇ ಪ್ರತಿವಾದಿಯ ಕಸಿನ್ ಮನೆಯಲ್ಲಿ ನಿಪಿ–1 ಕ್ಕೆ ಸಹಿ ಮಾಡಿರುತ್ತೇವೆ . ನಿಪಿ–1 ರ ವ್ಯವಹಾರ ನನ್ನ ಮುಂದೆ ಆಗಿರುತ್ತದೆ . ಕ್ರಯದ ಮಾತುಕತೆ ವಾದಿ ಪ್ರತಿವಾದಿಗಳೇ ಮಾಡಿಕೊಂಡಿದ್ದಾರೆ . ದಿನಾಂಕ 16.06.2014 ರಂದು 1ನೇ ಪ್ರತಿವಾದಿ ವಾದಿಗಳಿಂದ ಹೆಚ್ ಡಿ ಎಫ್ ಸಿ ಬ್ಯಾಂಕ್, ಕೊಳ್ಳೇಗಾಲದ ಡಿಡಿ ಮೂಲಕ 3.50 ಲಕ್ಷ ಪಡೆದುಕೊಂಡಿರುತ್ತಾರೆ . ಡಿಡಿ ನಂಬರಿ 506 ಇರುತ್ತದೆ . ತಲಾ 3.50 ಲಕ್ಷ ಕ್ಕೆ ಕೊಟ್ಟ ಚೆಕ್ ನಗದಿಕರಣಗೊಂಡಿದೆ ಎಂದು ನನಗೆ ಗೊತ್ತೀಲ್ಲ. ನಿಪಿ–1 ಎಷ್ಟು ಅವಧಿಗೆ ಮಾಡಿದ್ದಾರೆಂದು ನನಗೆ ಗೊತ್ತಿಲ್ಲ. ಸದರಿ ಅವಧಿ ಬಗ್ಗೆ ನಿಪಿ–1 ರಲ್ಲಿ ನಮೂದು ಮಾಡಿರುತ್ತಾರೆ . ನಿಪಿ–1 ಮಾಡಿದ ನಂತರದ ವ್ಯವಹಾರದ ಬಗ್ಗೆ ನನಗೆ ಗೊತ್ತಿಲ್ಲ . ನಿಪಿ–1 ರ ವಿಚಾರವನ್ನು ಸುಮಾರಾಗಿ

ತಿಳಿದುಕೊಂಡಿದ್ದೆನೆ .ನಾನು ಎ ಆರ್ ಡೈರಿಯಲ್ಲಿ ಕೆಲಸ ಮಾಡುತ್ತಿದ್ದೆನೆಂದು ವಾದಿಗೆ ಸಹಾಯ ಮಾಡಲು ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆಂದರೆ ಸರಿಯಲ್ಲ.

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಪಡಿಸಲಾಯಿತು.

ಓ ಹೇ ಕೇ ಸಾ ಸ ಇ ಒ

(ಸುನೀತ)
ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು
ಪ್ರ.ದ.ನ್ಯಾ ದಂ. ಕೊಳ್ಳೇಗಾಲ.